ಲಂಕೇಶ್ ಎಂಬ ಕಡಲಿನ ತಟದಲ್ಲಿ ಅನಾಥವಾಗಿ ಬೀಳಬೇಕಾಗುತ್ತಿತ್ತು. ಯೋಗಪ್ಪನವರಲ್ಲಿದ್ದ ಗ್ರಾಮೀಣ ಮುಗ್ಧತೆ ಮತ್ತು ಓದಿದ್ದೇನೆ ಎಂಬುದನ್ನು ತೋರಿಸಿಕೊಳ್ಳದ ಸಂಕೋಚ ಸ್ವಭಾವ ಲಂಕೇಶ್ ಅವರನ್ನು ಬಹುವಾಗಿ ಆಕರ್ಷಿಸಿತ್ತು. ಲಂಕೇಶ್ ಅವರ ಒಡನಾಟಕ್ಕೆ ಅವರು ಬಂದ ಅನಂತರ ಅವರೊಂದಿಗಿನ ವಾದ, ವಾಗ್ವಾದ, ಜಗಳಗಳಲ್ಲಿ (ತುಂಬಾ ಕ್ವಚಿತ್ತಾದ ಸಂದರ್ಭದಲ್ಲಿ) ಅವರು ಬದುಕನ್ನು ಬೇರೆ ನೆಲೆಯಿಂದ ನೋಡಲು ಪ್ರಾರಂಭಿಸಿದರು. 'ಲಂಕೇಶ್ ಪತ್ರಿಕೆ'ಯ 'ರೂಪಕ ಲೇಖಕರು' ಅಂಕಣಕ್ಕೆ ಬದುಕು ಮತ್ತು ಬರಹ ಎರಡರಲ್ಲೂ ಭಿನ್ನ ಜಾಡಿನಲ್ಲಿ ನಡೆದ ಲೇಖಕರ ಬಗ್ಗೆ ಯೋಗಪ್ಪನವರ್ ಅವರು ಲೇಖನಗಳನ್ನು ಸಿದ್ಧಪಡಿಸಿದರು. ಆಗ ವಿಶ್ವದ ಶ್ರೇಷ್ಠ ಲೇಖಕರ ವಿಲಕ್ಷಣ ವ್ಯಕ್ತಿತ್ವಗಳಲ್ಲಿ ಕಂಡ ಬೆಳಕು ಹೊಸದಾಗಿತ್ತು, ಅನನ್ಯವಾಗಿತ್ತು. ಅಲ್ಲಿ ಅವರು ಪಡೆದದ್ದು ಬೆಂಕಿಯಂತಹ ಬೆಳಕಾಗಿತ್ತು. ಸಲಿಂಗಕಾಮಿ ಪಾಲ್ ವರ್ಲೇನ್, ಜೂಜುಗಾರ ಎಡ್ಗರ ಅಲನ್ ಪೋ, ಬೀದಿಬದಿಯ ಕೊಳಲುವಾದಕ ಆಲಿವರ್ ಗೋಲ್ಡ್‌ಸ್ಮಿತ್, ಅಫೀಮು ವ್ಯಸನಿ ಜಾರ್ಜ ಕ್ರ್ಯಾಬ್, ವಾರಾಂಗನೆ ಸ್ಯಾಫೋ ಮುಂತಾದವರ ವಿಲಕ್ಷಣ, ಬೆಚ್ಚಿಬೀಳಿಸುವ ಜಗತ್ತಿನಲ್ಲಿ ಅವರು ಸಂಚರಿಸಿ ಬಂದರು. ಹಳೆಯದನ್ನು ಛಿದ್ರಗೊಳಿಸಿ ಹೊಸದನ್ನು ಸೃಷ್ಟಿಸಲು ಹೋಗಿ ಆತ್ಮಾಹುತಿ ಮಾಡಿಕೊಂಡು ಅಮರರಾದ ರೂಪಕ ಲೇಖಕರ ಅಪಾರಂಪರಿಕ ಮಾದರಿಗಳು ಯೋಗಪ್ಪನವರ್ ಅವರಿಗೆ ತಾವು ಮುಂದೆ ಪಯಣಿಸಬೇಕಾದ ದುರ್ಗಮ ಹಾದಿಯಲ್ಲಿನ ದೀಪಸ್ತಂಭಗಳ ಹಾಗೆ ಗೋಚರಿಸಿದವು.

ಈ ಅವಧಿಯಲ್ಲಿಯೇ ಅವರು 'ಒಂದು ಶಹರದ ಸುತ್ತ' ನಾಟಕ ಬರೆದದ್ದು. ಈ ನಾಟಕದಲ್ಲಿನ ಘಟನಾವಳಿಗಳು ನಗರದ ದುರ್ವಾಸನೆಯನ್ನು ಮೂಗಿಗೆ ರಪ್ಪನೆ ರಾಚುವಂತೆ ಮಾಡುತ್ತವೆ. ನಿರ್ದಯಿ ತಾಯಿಯೊಬ್ಬಳು ತೊಟ್ಟಿಯಲ್ಲಿ ಎಸೆದು ಹೋದ ಮಗುವೊಂದನ್ನು ನಾಯಿನರಿಗಳು ಅರ್ಧಂಬರ್ಧ ತಿಂದು ಬಿಸುಟಿದಂತೆ ಇಲ್ಲಿನ ಶಹರ ಚಿತ್ರಿತವಾಗಿದೆ. ಈ ನಾಟಕದ ಬೆಂಗಳೂರು ಮೇಲ್ನೋಟಕ್ಕೆ ಸಭ್ಯ ಮನುಷ್ಯ ಜೀವಿಗಳು ವಾಸಿಸುವ ಊರಿನಂತೆ ಕಂಡರೂ ಅದು ನಿಜವಾಗಿಯೂ ಬೇಟೆಗಾರರ ಮಹಾ ಕಾಡಾಗಿದೆ. ಇದೊಂದು ನಿಗೂಢ ನಗರ. ಇಲ್ಲಿ ನಾಯಿಗಳು ಜಿಂಕೆಯನ್ನು ಬೇಟೆಯಾಡಬೇಕಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಜಿಂಕೆಗಳು ನಾಯಿಯನ್ನು ಬೇಟೆಯಾಡಲು ಪ್ರಶಸ್ತವಾದ ನಗರವಾಗಿದೆ. ಮೆತ್ತನೆಯ ಮಾತುಗಳಲ್ಲಿ ಹರಿತವಾದ ಅಲಗನ್ನು ಮಿಂಚಿಸುವುದು ಹೇಗೆ ಎನ್ನುವುದನ್ನು ಕಲಿಸಿಕೊಡುವ ಒಂದು ದೊಡ್ಡ ತರಬೇತಿ ಕೇಂದ್ರ ಬೆಂಗಳೂರು. ಅಂಥ ಅಲಗಿನ ಮೇಲೆ ಬದುಕಿನ ಮೌಲ್ಯಗಳು ಹೆಣವಾಗಿ ತಣ್ಣಗೆ ಮಲಗಿರುವ ರೌದ್ರವನ್ನು ಬೆಚ್ಚಗೆ ಎದೆಯಲ್ಲಿ ಇಟ್ಟುಕೊಂಡ ನಗರದ ಚಿತ್ರಣ ಇಲ್ಲಿದೆ.

ಈ ನಡುವೆ ಫ್ರೆಂಚ್ ಕವಿ ಬೋದಿಲೇರ್ ಅವರನ್ನು ಗಾಢವಾಗಿ ಪ್ರಭಾವಿಸಿರುವುದು ಕಂಡು ಬರುತ್ತದೆ. ಬೋದಿಲೇರ್ ಅವರ ಪ್ರತಿಭೆಗೆ ಹೊಸ ಹೊಳಪನ್ನು ಕೊಟ್ಟ ಮಹಾ ಕವಿ. 'ಪಾಪದ ಹೂವುಗಳು' ಕವನ ಸಂಗ್ರಹದ ಮೂಲಕ ಪಿ. ಲಂಕೇಶ್ ಬೋದಿಲೇರ್ ಬಗೆಗಿನ ಕುತೂಹಲವನ್ನು ಎಲ್ಲಿಗೆ ತಂದು ನಿಲ್ಲಿಸಿದ್ದರೋ ಅಲ್ಲಿಂದ ಯೋಗಪ್ಪನವರ್ ತಮ್ಮ ಪಯಣವನ್ನು ಮುಂದುವರೆಸಿದ್ದಾರೆ. ಬೋದಿಲೇರ್ ತನ್ನ ಜೀವಿತದ ಕೊನೆಯ ಎಂಟು ವರ್ಷಗಳಲ್ಲಿ ರಚಿಸಿದ ಐವತ್ತು ಗದ್ಯ ಕವಿತೆಗಳ ಅನುವಾದವನ್ನು 'ಮಾಯಾಕನ್ನಡಿ'ಯಲ್ಲಿ ಹಿಡಿದಿಟ್ಟಿದ್ದಾರೆ. ಬೋದಿಲೇರ್ ತನ್ನ ಬದುಕಿನ ಪೂರ್ವಾರ್ಧದಲ್ಲಿ ತನ್ನ ಸುತ್ತಲೂ ಹಬ್ಬಿದ ಕನ್ನಡಿಗಳಲ್ಲಿ ತನ್ನನ್ನೇ ನೋಡಿಕೊಂಡನೇ ಹೊರತು, ಬೇರೆ ಯಾರನ್ನೂ ನೋಡಲಿಲ್ಲ. ಆದರೆ, ಅದೇ ಬೋದಿಲೇರ್ ತನ್ನ ಬದುಕಿನ ಉತ್ತರಾರ್ಧದಲ್ಲಿ ಸುತ್ತಲಿನ ಜಗತ್ತಿಗೆ ತಾನೇ ಕನ್ನಡಿಯಾದ. ಈ ಸತ್ಯ ಯೋಗಪ್ಪನವರ್ ಅವರನ್ನು ಬಹುವಾಗಿ ಆಕರ್ಷಿಸಿತು. ಹೀಗಾಗಿ ಲಂಕೇಶ್ ಕಂಡ ಬೋದಿಲೇರ್‌ಗಿಂತ ಭಿನ್ನವಾದ ಬೋದಿಲೇರ್‌ನನ್ನು ಪರಿಚಯಿಸಲು ಅವರಿಗೆ ಸಾಧ್ಯವಾಯಿತು. ಬೋದಿಲೇರ್‌ನ ಕೊನೆಯ ದಿನಗಳ ಮುಸ್ಸಂಜೆಯಲ್ಲಿ ಅಂತಃಕರಣ